Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ. 4 ಚಾ.ಸಾ. 4

| | | |
|---|---|---|
| ಹೆಸರು | : | ದೊಡಪ್ಪ |
| ತಂದೆಯ ಹೆಸರು | : | ಮಲ್ಲಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬಳಿಚಕ್ರ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 05-02-2024**
**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ**

ನನಗೆ ಚಾಸಾ-3 ಮರೆಪ್ಪ ಗೊತ್ತು. ಮೃತ ತಿಮ್ಮಪ್ಪ ಗೊತ್ತು. ನನಗೆ ಚಾಸಾ-1 ಶರಣಪ್ಪ ಗೊತ್ತು. ಈಗ್ಗೆ 4-5 ವರ್ಷಗಳ ಹಿಂದೆ ಸೈದಾಪೂರದ ಸರಕಾರಿ ಆಸ್ಪತ್ರೆಯಲ್ಲಿ ಕರೆಸಿದ್ದರು. ಅಲ್ಲಿ ಪೊಲೀಸರು ತಿಮ್ಮಪ್ಪನ ಶವ ಪಂಚನಾಮೆ ಮಾಡಿದ್ದು ಆ ಸಮಯದಲ್ಲಿ ನಾನು ಹಾಜರಿದ್ದು ಈಗ ನನಗೆ ಓದಿ ಹೇಳಿದ ಶವ ಪಂಚನಾಮೆಗೆ ಹೆಬ್ಬಟ್ಟಿನ ರುಜು ಮಾಡಿರುತ್ತೇನೆ. ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.8 ರಿಂದ 11 ಎಂದು ಗುರುತಿಸಲಾಯಿತು. ನಂತರ ಬಳಿಚಕ್ರ ಗ್ರಾಮದ ಚೌರಸ್ತದ ಹತ್ತಿರ ಪೊಲೀಸರು ಶರಣಪ್ಪ ತೋರಿಸಿದ ಸ್ಥಳದಲ್ಲಿ ಈಗ ನನಗೆ ಓದಿ ಹೇಳಿದ ಮಹಜರನಲ್ಲಿ ಹೆಬ್ಬಟ್ಟಿನ ರುಜು ಮಾಡಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದೆ. ನಿ.ಪಿ.3 ರಿಂದ 6 ಫೋಟೊಗಳನ್ನು ಪಂಚನಾಮೆ ಕಾಲಕ್ಕೆ ತೆಗೆದಿದ್ದಾರೆ. ಈ ಎರಡೂ ಪಂಚನಾಮೆಗಳನ್ನು ಓದಿ ಹೇಳಿದ ನಂತರ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ.

**ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ**

**2.** ನಾನು ಮತ್ತು ಮರೆಪ್ಪ ಸೈದಾಪೂರಕ್ಕೆ ಹೋಗಿದ್ದೆವು ಅಲ್ಲಿ ಶರಣಪ್ಪ ಇದ್ದರು. ನಾವು 3 ಜನರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಪೊಲೀಸರು ನನ್ನನ್ನು ಸಹಿ ಮಾಡಲು ಕರೆದರು. ಅವರ ಹೆಸರು ಮತ್ತು ಹುದ್ದೆ ಗೊತ್ತಿಲ್ಲ. ಆ ಪಂಚನಾಮೆ ಯಾವ ವಿಷಯಕ್ಕೆ ಎಂದು ಹೇಳಲಿಲ್ಲ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಹೇಳಲಿಲ್ಲ ನಾನು ಬೆಂಗಳೂರಿನಲ್ಲಿ

ಇರುತ್ತೇನೆ. ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಹೆಬ್ಬೆಟ್ಟಿನ ಸಹಿ ಮಾಡಿದ್ದೇನೆ. ಆ ಚೌರಸ್ತ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ, ಯಾವ ಕಾರಣಕ್ಕೆ ಪಂಚನಾಮೆ ಮಾಡಿದರು ಎಂದು ಹೇಳಿಲ್ಲ. ಅಲ್ಲಿ ಬಸವರಾಜ ಅವರ ಅಂಗಡಿ ಇರುವದು ಗೊತ್ತು. ಅದರ ಪಕ್ಕ ಒಂದು ಮೋರಿ ಇದೆ ಎಂದರೆ ಸರಿ. ಆ ಮೋರಿ ರಸ್ತೆ ಇಂದ ಹೋಗುತ್ತದೆ ಎಂದರೆ ಸರಿ. ಅಲ್ಲಿ ಜನರು ಕುಡಿದು ಬಂದು ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಯಾರು ಸತ್ತಿದ್ದಾರೆ ಎಂಬ ಕುರುಹುಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಶರಣಪ್ಪ ನನ್ನ ಸಂಬಂಧಿಯಲ್ಲ. ನನಗೆ ಈ ಪಂಚನಾಮೆಗಳ ಬಗ್ಗೆ ಏನೂ ಗೊತ್ತಿಲ್ಲ ಮತ್ತು ಶರಣಪ್ಪನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.